# ಬಿ.ಬಿ.ಎಂ.ಪಿ ಮಹದೇವಪುರವಲಯ, ವಾರ್ಡ್ ಸಂಖ್ಯೆ.53, ಬಸವನಪುರ

## ವಾರ್ಡ್ ಸಮಿತಿಯ ನಡವಳಿಗಳು

******

ದಿನಾಂಕ: 02-02-2019

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಹಾಗೂ ಅಧಿಕಾರಿಗಳು**

1. ಶ್ರೀ. ಬಿ.ಎನ್.ಜಯಪ್ರಕಾಶ್
2. ಶ್ರೀ. ಆಂಜಿನಪ್ಪ
3. ಶ್ರೀ. ಎಂ.ರಾಮಚಂದ್ರ
4. ಶ್ರೀಮತಿ ಇಂದ್ರಾಣಿ
5. ಶ್ರೀಮತಿ ಗುಲ್ನಾಜ್
6. ಶ್ರೀಮತಿ ಗಿರಿಜ.ಕೆ
7. ಕರ್ಣಶ್ರೀ ವೆಲ್‌ಫೇರ್ ಅಸೋಸಿಯೇಷನ್
8. ಶೈನ್ ರೆಸಿಡೆನ್ಸಿಯಲ್ ವೆಲ್‌ಫೇರ್ ಅಸೋಸಿಯೇಷನ್
9. ಶ್ರೀ. ಕೃಷ್ಣಮೂರ್ತಿ
10. ಶ್ರೀ. ವಿ.ಹೆಚ್.ಉದಯ್‌ಕುಮಾರ್
11. ಶ್ರೀ.ಡಿ.ಎಸ್.ವೆಂಕಟೇಶ್

**ಹಾಜರಿದ್ದ ಅಧಿಕಾರಿಗಳು**

1. ಶ್ರೀ. ವಿನಯ್. ಕೆ, ಸಹಾಯಕಅಭಿಯಂತರರು, ವಾರ್ಡ್ ಸಂಖ್ಯೆ.53, ಬಸವನಪುರ
2. ಶ್ರೀ. ರಾಘವೇಂದ್ರ, ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.53, ಬಸವನಪುರ

ದಿನಾಂಕ 02-02-2019 ರಂದು ಕೆ.ಆರ್.ಪುರ ವಿಧಾನಸಭಾಕ್ಷೇತ್ರದ, ಬಿ.ಬಿ.ಎಂ.ಪಿ ಮಹದೇವಪುರ ವಲಯದ ವಾರ್ಡ್ ಸಂಖ್ಯೆ.53, ಬಸವನಪುರದ ವಾರ್ಡ್ ಸಮಿತಿಯ ಸಭೆಯನ್ನು ಮಾನ್ಯಅಧ್ಯಕ್ಷರು ವಾರ್ಡ್ ಸಮಿತಿ ಮತ್ತು ಬಿ.ಬಿ.ಎಂ.ಪಿ ಸದಸ್ಯರಾದ ಶ್ರೀ. ಬಿ.ಎನ್.ಜಯಪ್ರಕಾಶ್ ಮತ್ತು ವಾರ್ಡ್ ಸಮಿತಿ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರಾದ ಶ್ರೀ. ವಿನಯ್.ಕೆ ರವರ ಸಮ್ಮುಖದಲ್ಲಿ ನಡೆಸಲಾಯಿತು.

Scanned by CamScanner

ಸದರಿ ಸಭೆಯಲ್ಲಿ ಮೊಟ್ಟಮೊದಲಿಗೆ ಎಲ್ಲಾ ಸದಸ್ಯರ ಪರಸ್ಪರ ಪರಿಚಯ ಮಾಡಿಕೊಂಡು, ಮಾನ್ಯ ಸದಸ್ಯರು ವಾರ್ಡ್‌ನಲ್ಲಿ ಮಾಡಿರುವಂತಹ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಸವಿವರವಾಗಿ ತಿಳಿಸಲಾಯಿತು.

ಮೊದಲಿಗೆ ವಾರ್ಡ್‌ನಲ್ಲಿ ಪ್ರಿಯಾಂಕನಗರ, ಮೇಡಹಳ್ಳಿ, ದೊಡ್ಡಬಸವನಪುರ, ವೈಟ್‌ಸಿಟಿ, ಬೇತಾಲ್‌ನಗರ, ಸೀಗೆಹಳ್ಳಿ, ಕುವೆಂಪು ಬಡಾವಣೆ, ಸಮೃದ್ಧಿ ಬಡಾವಣೆ, ಶ್ರೀರಾಮಪ್ಪ ಬಡಾವಣೆಗಳಲ್ಲಿ 24.10% ರ ಅನುದಾನದಲ್ಲಿ ಹೊಸದಾಗಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.

2017–18ನೇ ಸಾಲಿನ ಪಿ.ಓ.ಡಬ್ಲ್ಯೂ ಅನುದಾನದಲ್ಲಿ ತೆಗೆದುಕೊಂಡಿರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆಯನ್ನು ಮಾಡುವ ಬಗ್ಗೆ ಚರ್ಚಿಸಲಾಯಿತು. ತದನಂತರ 2017–18ನೇ ಸಾಲಿನಲ್ಲಿ ನೀರು ಸರಬರಾಜಿಗೆ ನೀಡಿರುವ ಅನುದಾನದಲ್ಲಿ, ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಇರುವ ಕಡೆ ಬೋರ್‌ವೆಲ್‌ಗಳನ್ನು ಕೊರೆಸಲು ತೀರ್ಮಾನಿಸಲಾಯಿತು. ಈಗಾಗಲೇ ಚರಂಡಿ ಕಾಮಗಾರಿಗಳು ಮುಗಿದಿರುವ ರಸ್ತೆಗಳಿಗೆ ಆದಷ್ಟು ಬೇಗ ಡಾಂಬರೀಕರಣ ಮಾಡಬೇಕೆಂದು ತೀರ್ಮಾನಿಸಲಾಯಿತು. ಸದಸ್ಯರು ಆಗಿಂದಾಗೆ ಕಾಮಗಾರಿಗಳನ್ನು ಪರಿವೀಕ್ಷಿಸಿ ಉತ್ತಮ ಸಲಹೆಗಳನ್ನು ಹಾಗೂ ಅತ್ಯವಶ್ಯಕವಾಗಿರುವ ಕಾಮಗಾರಿಗಳನ್ನು ಗುರುತಿಸಿ ಮುಂದಿನ ಸಭೆಯಲ್ಲಿ ತಿಳಿಸಲು ಕೋರಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಮಾನ್ಯ ಅಧ್ಯಕ್ಷರು ವಾರ್ಡ್ ಸಮಿತಿ<br>ಮತ್ತು ಬಿಬಿಎಂಪಿ ಸದಸ್ಯರು | ವಾರ್ಡ್ ಸಮಿತಿ ಕಾರ್ಯದರ್ಶಿಗಳು<br>ಹಾಗೂ ಸಹಾಯಕ ಅಭಿಯಂತರರು |

Scanned by CamScanner